ಒ.ಎಸ್.ನಂಬ್ರ:110-2016 ಡಿ.ಡಬ್ಲ್ಯೂ: 1

ದಿನಾಂಕ:13-03-2019 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಶ್ರೀಎಲ್.ಎಸ್. ವಕೀಲರಿಂದ

ನಮ್ಮ ತಾಯಿ ಚನ್ನು ದಾವ ಸ್ವತ್ತಿನಲ್ಲಿ ಹುಟ್ಟಿ ಬೆಳೆದಿರುತ್ತಾರೆ. ಅವರ ತಾಯಿ ಸರ್ವಶ್ರಿ ಸಹ ಅದೇ ಮನೆಯಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ದಾವ ಸ್ತಳದಲ್ಲಿ ವಾದಿಯ ಮನೆ ಸಹ ಇರುತ್ತದೆ. ಸರಕಾರದಿಂದ ಅಂಬೇಡ್ಕರ್ ಸ್ಕೀಮ್ ನ ಅಡಿಯಲ್ಲಿ ಮನೆ ನಿರ್ಮಿಸಲು ನನಗೆ ಮತ್ತು ವಾದಿಗೆ ತಲಾ 15,000/- ಹಣ ಬಂದಿರುತ್ತದೆ. ದಾವ ಸ್ವತ್ತಿನ ಒಂದು ದಿಕ್ಕಿನಲ್ಲಿ ನಮ್ಮ ಮನೆ ಮತ್ತು ಇನ್ನೊಂದು ದಿಕ್ಕಿನಲ್ಲಿ ಬಾಬು ಮನೆ ಇರುತ್ತದೆ. ನಮ್ಮ ತಾಯಿ 5-6 ವರ್ಷದಿಂದ ಖಾಯಿಲೆಯಿಂದ ಬಳಲುತ್ತಿದ್ದರು. ಅವರು ಸಾಯುವ ಸಮಯದಲ್ಲಿ ಹಾಸಿಗೆ ಇಡಿದಿದ್ದರು. ನಿಪಿ-4 ನ್ನು ಕುಂದಾಪುರದಲ್ಲಿ ಬರೆದಿದ್ದು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದ್ರಿ ವಿಲ್ ನಾಮೆಗೆ ಮಹಾಬಲ ನಾಯ್ಕ ಮತ್ತು ಪ್ರಭಾಕರ ಎನ್ನುವವರು ಸಾಕ್ಷಿಯನ್ನಾಗಿ ಸಹಿ ಮಾಡಿರುತ್ತಾರೆ. ವಿಲ್ ನಾಮೆಯನ್ನು ಬರೆಯುವ ಸಮಯದಲ್ಲಿ ನಾನು ನಮ್ಮ ತಾಯಿಯನ್ನು ಕರೆದುಕೊಂಡು ಕುಂದಾಪುರಕ್ಕೆ ಬಂದಿದ್ದೆನು. ಪ್ರಭಾಕರ ರವರು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಸದ್ರಿ ಸಾಕ್ಷಿದಾರರನ್ನು ನಾನು ಸ್ವತಃ ಕರೆದುಕೊಂಡು ಬಂದಿದ್ದೆನು. ನಮ್ಮ ತಾಯಿ ಮತ್ತು ಬರಹಗಾರರು

ಹೇಳಿದ್ದರಿಂದ ಸಾಕ್ಷಿದಾರರು ರುಜು ಮಾಡಿರುತ್ತಾರೆ. ನಿಪಿ-4 ನ್ನು ಬರೆದವರು ಯಾರು ಎಂದು ನನಗೆ ನೆನಪಿಲ್ಲ. ಅದು ಎಷ್ಟು ಪುಟ ಇರುತ್ತದೆ ಎಂದು ನನಗೆ ನೆನಪಿಲ್ಲ. ಅದನ್ನು ಕನ್ನಡದಲ್ಲಿ ಬರೆಯಲಾಗಿದೆಯೋ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಬರೆಯಲಾಗಿದೆಯೋ ಎಂದು ನನಗೆ ನೆನಪಿಲ್ಲ. ವಿಲ್ ನಾಮೆಯ ಆಧಾರದ ಮೇಲೆ ನಾವು ಪಹಣಿ ಪತ್ರಿಕೆಯಲ್ಲಿ ನಮ್ಮ ಹೆಸರನ್ನು ನಮೂದಿಸಿಕೊಂಡಿದ್ದು ಅ ಬಗ್ಗೆ ವಾದಿಯ ಉಪ ವಿಭಾಗಾಧಿಕಾರಿಗಳಲ್ಲಿ ಸಲ್ಲಿಸಿದ ತೀರ್ಪು ಏನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ವಿಲ್ ನಾಮೆಯ ಆಧಾರದ ಮೇಲೆ ನಮ್ಮ ಹಕ್ಕು ಘೋಷಣೆ ಕೇಳಿ ನಾವು ದಾವೆಯನ್ನು ಹೂಡಿರುವುದಿಲ್ಲ. ವಿಲ್ ನಾಮೆಯನ್ನು ನೊಂದಣಿ ಮಾಡಿರುವುದಿಲ್ಲ. ನೊಂದಣಿ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ದಾವ ಸ್ವತ್ತನ್ನು ನಮ್ಮ ಅಜ್ಜಿ ಸರ್ವಶ್ರೀ ಕಾಲದಿಂದ ನಮ್ಮ ಕುಟುಂಬದವರು ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರು ಬುಡ್ಡ. ಅವರು ಸಹ ದಾವ ಸ್ವತ್ತಿನಲ್ಲಿ ವಾಸ ಇದ್ದರು. ಅವರು ಅಕ್ರಮ ಸಕ್ರಮಕ್ಕೆ ಅರ್ಜಿ ಸಲ್ಲಿಸಿದ್ದು ಮಂಜೂರು ಮಾಡಿಸಿಕೊಳ್ಳಲು ಸಾಧ್ಯ ಆಗಲಿಲ್ಲ. ನಾನು ಮಂಜೂರು ಮಾಡಿಸಿಕೊಂಡಿರುತ್ತೇನೆ. ಕುಟುಂಬದ ಪರವಾಗಿ ಕೊಟ್ಟ ಆಜಿರ್ಯನ್ನು ನಮ್ಮ ಹೆಸರಿಗೆ ದಾವ ಸ್ವತ್ತನ್ನು ವುಂಜೂರು ಮಾಡಿಸಿಕೊಂಡಿರುತ್ತೇವೆ ಎಂದರೆ

ಸರಿಯಲ್ಲ, ನಿಪಿ-4 ನ್ನು ನಾವೆ ಸೃಷ್ಠಿಸಿಕೊಂಡಿದ್ದು ಅದರಲ್ಲಿ ಇರುವುದು ನಮ್ಮ ತಾಯಿಯ ಹೆಬ್ಬೆರಳ ಗುರುತು ಅಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸುಳ್ಳು ಸಾಧನೆ ಮಾಡಲು ನಿಪಿ-4 ನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಓ.ಹೇ.ಕೇ.ಸರಿ ಇದೆ ನನ್ನ ಹೇ.ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ ಕುಂದಾಪುರ